ನಿಕ್ಕರಿನ ಜೇಬಿನಿಂದ ಇರೋ ಬರೋ ದುಡ್ಡನ್ನು ಕೈಲಿ ಹಿಡಿದು ನೋಡುತ್ತಿದ್ದ. ಈತನಿಗೆ 'ಈ ಚಿಲ್ಲರೆ ಹಣದಲ್ಲಿ ಏನು ಆಗಲ್ಲ ನಾನೆ ಕೊಟ್ಟು ಮಾಡಿಸಿರುತ್ತೇನೆ. ಆಮೇಲೆ ಕೊಡೀವಂತೆ' ಎಂದು ಈತನನ್ನ ವಿಲೇಜ್ ಅಕೌಂಟೆಂಟ್ ಅವರ ಕಚೇರಿಗೆ ಕರ್ಕೊಂಡೋಗಿ ಆ ಅಧಿಕಾರಿಗೆ ಪರಿಚಯ ಮಾಡಿಸುತ್ತ 'ನೋಡಿ ಸಾರ್ ಬಹಳ ಮುಗ್ಧ. ಏನೋ ಮಾಡೋಕೋಗಿ ಈ ಉದ್ಧಾರವಾಗೋ ಕೆಲಸಕ್ಕೆ ಕೈಹಾಕಿದ್ದಾನೆ. ಮೊನ್ನೆ ಹೇಳಿದ್ನಲ್ಲ ಒಂದು ವಿಚಾರ ಆ ಹನುಮಪ್ಪ ಇವನೆ' ಎಂದು ಹೇಳಿದಾಗ ಆ ಅಧಿಕಾರಿ 'ಅಯ್ತು ಬಸವರಾಜಪ್ಪ ಮಾಡಿಕೊಡೋಣ' ಎಂದು ನಗೆ ಬೀರಿದ್ದನ್ನು ಹನುಮಪ್ಪ ನೋಡಿ ಕೈ ಮುಗಿದ, ಅಷ್ಟೊತ್ತಿಗೆ ಬಸವರಾಜಪ್ಪ ತನ್ನಲ್ಲಿದ್ದ ಒಂದು ಸೆಟ್ ಜೆರಾಕ್ಸ್ ಗೆ ಆ ವಂಶವೃಕ್ಷ ಹಾಕಿ ಈತನ ಹತ್ತಿರವಿದ್ದ ಆಧಾರ್ ಕಾರ್ಡ್‌ನು ಇಸ್ಕೊಂಡು ಅದುನ್ನ ಹಾಕಿ ಒಟ್ಟುಗೂಡಿಸಿ, ತಾನೆ ಒಂದು ಅರ್ಜಿ ಬರೆದು ಹನುಮಪ್ಪನ ಹತ್ತಿರ ರುಜು ಹಾಕಿಸಿ ಆ ಅಧಿಕಾರಿಗೆ ಕೊಟ್ಟು, 'ಆಮೇಲೆ ಕಾಣ್ತೇನಿ ಸಾರ್' ಅನ್ನುತ್ತಾ ಈ ಇಬ್ಬರು ಹೊರ ಬಂದು ಅದು ಇದು ಮಾತಾಡ್ತಾ ಬಸ್ ಸ್ಟಾಂಡ್‌ವರೆಗೆ ನೆಡಕೊಂಡೆ ಬಂದು ಈತನನ್ನು ಬಸ್ಗೆ ಕಳಿಸೋ ಮುಂಚೆ, 'ಹನುಮಪ್ಪ ಇಷ್ಟೆ ಕೆಲಸ ಉಳಿದಿದ್ದು ನನಗೆ ಬಿಡು ಮಾಡುಸ್ತೇನೆ ಇನ್ನೊಂದು ಹೈದಿನೈದು ದಿನ ಬಿಟ್ಟು ಬಾ ಅಷ್ಟೊತ್ತಿಗೆ ಉಳಿದ ಕೆಲಸ ಮಾಡ್ಸಿರ್ತೇನೆ, ಅಮೇಲೆ ನಾನು ಹೇಳಿ ಮಾಡ್ಸೋ ಕೆಲಸಕ್ಕೆ ಸ್ವಲ್ಪ ಹಣ ಖರ್ಚಾಗುತ್ತೆ,ಅವರಿಗೂ ಇವರಿಗು ಸ್ವಲ್ಪ ಕೊಡಬೇಕು ಒಂದು ಮೂರು ಸಾವಿರ ತಕ್ಕೊಂಡು ಬರೋದ ಮರಿಬ್ಯಾಡ' ಎಂದೇಳಿ ಕಲ್ಲಳ್ಳಿಗೆ ಹೋಗೊ ಬಸ್ಸ ಹತ್ತಿಸಿ ತನ್ನ ಮೊಬೈಲ್ ನಂಬರ್‌ನ ಒಂದಾಳೆಗೆ ಬರಕ್ಕೊಟ್ಟು, ಬಸವರಾಜಪ್ಪ ನಿಂಗೇಗೌಡ್ರು ಮನೆಕಡೆಗೆ ಹೆಜ್ಜೆಹಾಕಿದ.

ಇದೇ ಸಂತೋಷದಲ್ಲಿ ಊರು ಸೇರಿದ ಹನುಮಪ್ಪ ಹೊಲ ಮನಿಕಡೆ ಓಡಾಡುವಾಗ ದಾರಿಯ ಪಕ್ಕದಲ್ಲೇ ಇದ್ದ ನಂಜಪ್ಪನ ತೋಟ ನೋಡುತ್ತ ತಾನು ತೋಟ ಕಟ್ಟುವ ಛಲಕ್ಕೆ ಕನಸಿನಲ್ಲೇ ಗೊಬ್ಬರ ಹಾಕುತ್ತಯಿದ್ದ. ಈತನಿಗೆ ಹದಿನೈದ ದಿನ ಕಳೆದಿದ್ದೆ ಗೊತ್ತಾಗಲಿಲ್ಲ, ಒಂದಿನ ಬೆಂಗಳೂರಿಂದ ಬಂದಿದ್ದ ಈತನ ದೊಡ್ಡಪ್ಪನ ಮಗ ನಾಗೇಶ ಊರಿಗೆ ಬಂದಿದ್ದಾನೆ ಎಂದು ಗೊತ್ತಾಗಿ ತನ್ನ ಮಗ ಶಿವರಾಜನ್ನ 'ಪಾಪ ನಿಮ್ಮತಾತರ ಮನೆತಾವ ನಾಗೇಶ ಚಿಕ್ಕಪ್ಪ ಬಂದೌನೆ ಕರ್ಕಂಡು ಬರೋಗು' ಎಂದಾಗ 'ಹೂನಪ್ಪ ಚಿಕ್ಕಪ್ಪ ಬಂದು ಚಾಕ್ಲೇಟ್ ಕೊಟ್ಟು ಹೋಯ್ತು' ಎಂದೇಳುತ್ತಲೆ ತಾತನ ಮನೆತಾವ ಓಡೋಗಿ ಮತ್ತೆ ಆ ಕಡೆಯಿಂದ ಬರುವಾಗ ಚಿಕ್ಕಪ್ಪನ ಕೈ ಹಿಡಿದು ಎಳ್ಕೊಂಡು ಬಂದಾಗ ಹನುಮಪ್ಪ ಆತನ ಜೊತೆ ಅದು ಇದು ಸ್ವಲ್ಪ ಮಾತಾಡಿ, ಆತನ ಮೊಬೈಲ್ ನಿಂದ ಬಸವರಾಜಪ್ಪಂಗೆ ಪೋನ್ ಮಾಡುಸ್ದ, ಅತ್ತ ಕಡೆಯಿಂದ ಬಸವರಾಜಪ್ಪ ಹನುಮಪ್ಪನ ಜೊತೆ ಮಾತಾಡ್ತ 'ನಿನ್ನ ಕೆಲಸವೆಲ್ಲ ಆಗ್ಯೆತೆ ನಾಳೆ ಬಂದುಬಿಡು, ಬರುವಾಗ ಮೂರು ಸಾವಿರ ದುಡ್ಡು ಮರಿಬ್ಯಾಡ, ಅಮೆಲೆ ಗೌರ್ಮೆಂಟು ಅಂಬೇಡ್ಕರ್ ನಿಗಮ ಮಂಡಳಿಯಿಂದ ಕೊಳವೆ ಬಾವಿಗೆ ಅರ್ಜಿ ಕರ್ದಿದ್ದಾರೆ, ಕರೆಂಟ್ ಕೊಟ್ಟು ಕೊಳವೆ ಬಾವಿನು ಕೊರೆದು, ಪಂಪ್ ಸೆಟ್ಟು ಕೊಡೊ ಅಂತದ್ದಕ್ಕೆ ಅರ್ಜಿನ ಕೇಳ್ಕೊಂಡು ಹಾಕಬೇಕು. ಇಲ್ಲಾಂದ್ರೆ ಕೊಳವೆ ಬಾವಿ ಕೊರಕೊಟ್ಟು ಕರೆಂಟ್ ಲೈನ್ ನೀವೆ ಎಳಿಸ್ಕೊಳ್ಳಿ ಎಂದು ಹೇಳಿಬಿಡ್ತಾರೆ, ನಮ್ಮೂರಲ್ಲು ಹಿಂಗೆ ಕೆಲವರಿಗೆ ಕೊಳವೆಬಾವಿ ಕೊರ್ದು, ಕರೆಂಟ್ ಲೈನ್ ನೀವೇ ಹಾಕಿಸ್ಕಬೇಕು ಎಂದಿದ್ದಕ್ಕೆ, ಅವರ ಪಂಪ್ ಸೆಟೆಲ್ಲ ಹಣವಂತರ ಪಾಲಾಗಿವೆ ಎಂದು ಮನವರಿಕೆ ಮಾಡಿ, ಇಂತವೆಲ್ಲ ನೋಡ್ಕಂಡು ಅರ್ಜಿ ಹಾಕ್ಬೇಕು, ಎಂದು ಮೊಬೈಲ್‌ನಲ್ಲೇ ಹೇಳಿ ಬೆಳಿಗ್ಗೆ ಬಾ ಮರಿಬ್ಯಾಡ' ಎಂದು ಕರೆನ ಕಟ್ ಮಾಡಿದ್ದ. ಕಿವಿಯಿಂದ ಮೊಬೈಲ್ ತೆಗೆದ ಹನುಮಪ್ಪ ನಾಗೇಶಂಗೆ ಕೊಟ್ಟು ಆತ ಹೋದ ಮೇಲೆ ಮೂರು ಸಾವಿರ ದುಡ್ಡು ಹೊಂದಿಸೋ ಯೋಚನೆ ತಲೆಗೆ ಬಂದು, ಸಂಜೆ ಹೆಂಡ್ತಿ ಕೂಲಿಯಿಂದ ಬಂದ ಕೂಡಲೆ ಸಾಕಮ್ಮನಿಗೆ 'ಎ.. ಇವಳೆ ನಿಮ್ಮಪ್ಪರು ಮದುವೇಲಿ ಕೊಟ್ಟಿದ್ರಲ್ಲ ವಾಲೆಗಳು ಕೊಡ್ತಿಯಾ? ಹೇಳಿದ್ನಲ್ಲ ಆ ಕೆಲಸ ಆಗ್ಯೆತಂತೆ ನಾಳೆ ಅರ್ಜಿನು ಆಕ್ಬೇಕಂತೆ, ಅವು ಕೊಟ್ರೆ ಗಿರವಿ ಇಟ್ಟು ಅವಣ್ಣಂಗೆ ಕೊಡಕಾಗುತ್ತೆ, ಯಾವಗಾದ್ರು ದುಡ್ಡಿದ್ದಾಗ ಬಿಡಿಸಿಕಳನೆ' ಎಂದಾಗ ಮರುಮಾತಾಡದೆ ಆಕೆ 'ಹೂಂ ಕೊಡ್ತಿನಿ' ಎಂದು ರಾತ್ರಿ ಅಡಿಗೆಗೆ ಒಲೆ ಮುಂದೆ ಪಟ್ಟವಾದಳು.

ಹೊತ್ತಾರೆ ಹನುಮಪ್ಪ ದಿನನಿತ್ಯದ ತನ್ನ ಕೆಲಸಗಳನ್ನ ಮುಗಿಸಿ ಹೆಂಡ್ತಿ ಸಾಕಮ್ಮಂಗೆ, 'ಹೋಯ್ ಇವಳೆ